**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿಸಿ.ನಂ.133/2017**

**ಸಿ.ಡಬ್ಲ್ಯೂ-4**

**ಪಿ.ಡಬ್ಲ್ಯೂ-4**

| | | |
|---|---|---|
| ಸಾಕ್ಷಿಯ ಹೆಸರು | : | ನಾಗಪ್ಪ ಹೊನಗೊಂಡ |
| ತಂದೆ/ಗಂಡನ ಹೆಸರು | : | ಪಂಡೀತ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಅಂಜುಟಗಿ |

**ದಿನಾಂಕ: 14-11-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ</u>**

ಚಾಸಾ 1 ನನ್ನ ದೊಡ್ಡಪ್ಪ. ಚಾಸಾ 5 ಮತ್ತು 6 ನನ್ನ ದೊಡ್ಡಪ್ಪನ ಮಕ್ಕಳು. ಚಾಸಾ 7 ರಿಂದ 12 ರವರ ಪರಿಚಯ ಇರುತ್ತದೆ. ಆರೋಪಿತರು ಅಣ್ಣ-ತಮ್ಮಂದಿರರಾಗಬೇಕು. ದಿನಾಂಕ 09.03.2016 ರಂದು ಚಾಸಾ 6 ಮತ್ತು 1 ನೇ ಆರೋಪಿಯ ನಡುವೆ ಜಗಳ ಆಗಿತ್ತು. ಅಂಬಾಭವಾನಿ ಗುಡಿ ಹತ್ತಿರ ಸದರಿ ವಿಷಯ ಕುರಿತು ನ್ಯಾಯಪಂಚಾಯತಿ ಮಾಡಲು ಊರಿನ ಹಿರಿಯರಿಗೆ ವಿನಂತಿಸಿಕೊಂಡಿರುತ್ತೇನೆ. 16 ನೇ ತಾರೀಖಿಗೆ ಜಗಳವಾಗಿರುತ್ತದೆ. 4 ದಿನ ಬಿಟ್ಟು ದೇವಸ್ಥಾನದಲ್ಲಿ ನ್ಯಾಯಪಂಚಾಯತಿ ಆಗಿರುತ್ತದೆ. ಪಂಚಾಯತಿದಾರರು 1 ನೇ ಆರೋಪಿ ಮತ್ತು ಚಾಸಾ 6 ರವರನ್ನು ಜಗಳದ ಬಗ್ಗೆ ವಿಚಾರಿಸಲು ಆಗ ಮಾತಿಗೆ ಮಾತು ನಡೆದು ಇಬ್ಬರ ನಡುವೆ ಜಗಳ ಶುರುವಾಯಿತು. ಕೂತಿದ್ದ ನನಗೆ 7 ನೇ ಆರೋಪಿಯು ನನಗೆ ಹೊಡೆದಿರುತ್ತಾನೆ. ನಂತರ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡು ನಂತರ ದೂರನ್ನು ನೀಡಿರುತ್ತೇನೆ. 1 ನೇ ಆರೋಪಿಯು ಚಾಸಾ 1 ರವರಿಗೆ ಹೊಡೆದಿರುತ್ತಾರೆ. ಚಾಸಾ 5 ರವರಿಗೆ 7 ನೇ ಆರೋಪಿಗೆ ಹೊಡೆದಿರುತ್ತಾನೆ. ಎಲ್ಲರೂ ಕೂಡಿ ವಿಜಯಪುರ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ.

(ಈ ಹಂತದಲ್ಲಿ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

**<u>ಪಾಟೀ ಸವಾಲು : ಮಾನ್ಯ ಸ.ಸ.ಅ. ರವರಿಂದ:</u>**

ದಿನಾಂಕ 13.03.2016 ರಂದು ಸಂಜೆ 05.30 ಗಂಟೆಗೆ ಅಂಬಾಭವಾನಿ ದೇವಸ್ಥಾನ ಹತ್ತಿರ ಪಂಚಾಯತಿ ಕೂಡಿಸಿದ್ದರು ಎಂದರೆ ಸರಿ. ಆಗ ಅಲ್ಲಿ ಚಾಸಾ 1 ರವರು 1 ನೇ ಆರೋಪಿಗೆ ಯಾಕೆ ಈ ತರಹ ನಮ್ಮ ಹುಡುಗನಿಗೆ ದಾರಿಯಲ್ಲಿ ಹಿಡಿದುಕೊಂಡಿದ್ದಿ ಎಂದು ಕೇಳಿರುತ್ತಾರೆ ಎಂದರೆ ಸರಿ. 2 ನೇ ಆರೋಪಿಯು ಆಗ ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ಸರಿ. 2 ನೇ ಆರೋಪಿಯು ಚಾಸಾ 1 ರವರ ಕಪಾಳಿಗೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಆಗ ಜಗಳವನ್ನು ಬಿಡಿಸಲು ಹೋದ ಚಾಸಾ 5 ರವರಿಗೆ 2 ನೇ ಆರೋಪಿಯು ಕಲ್ಲಿನಿಂದ ಎಡಗಡೆಯ ಕಿವಿಯ ಮೇಲೆ, ಎಡಗಡೆ ಮಂಡಿಯ ಮೇಲೆ, ಸೊಂಟಕ್ಕೆ, ಎಡಗೈ ಬೆರಳುಗಳ ಹತ್ತಿರ ಹೊಡೆದಿರುತ್ತಾನೆ ಎಂದರೆ ಸರಿ. ಅದೇ ರೀತಿ 2 ನೇ ಆರೋಪಿಯು ನನಗೆ ಅದೇ ಕಲ್ಲಿನಿಂದ ಎಡಗಡೆ ಕಿವಿಯ ಹತ್ತಿರ ಹೊಡೆದಿರುತ್ತಾನೆ ಎಂದರೆ ಸಾಕ್ಷಿಯು 7 ನೇ ಆರೋಪಿಯು ಹೊಡೆದಿರುತ್ತಾನೆ ಎಂದು ನುಡಿಯುತ್ತಾರೆ. ಅದೇ ರೀತಿ ಚಾಸಾ 6 ರವರಿಗೆ 4 ನೇ ಆರೋಪಿಯು ಕಲ್ಲಿನಿಂದ ಬೆನ್ನಿಗೆ ಹಾಗೂ ಮಂಡಿಯ ಮೇಲೆ ಹೊಡೆದಿರುತ್ತಾನೆ ಎಂದರೆ ಸರಿ. ಆರೋಪಿತರು ನಮಗೆ ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಪಿ. 5 ಎಂದು ಗುರುತಿಸಲಾಯಿತು. ಅಲ್ಲಿ ನ್ಯಾಯ ಮಾಡಲು ಕೂತಿದ್ದ ಜನರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಈ ಕುರಿತು ಚಾಸಾ 1 ರವರು ದೂರನ್ನು ನೀಡಿರುತ್ತಾರೆ ಎಂದರೆ ಸರಿ. ನಾನು ದಿನಾಂಕ 21.03.2016 ರಂದು ವಿಜಯಪುರ ಸರ್ಕಾರಿ ಆಸ್ಪತ್ರೆಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಕಲ್ಲನ್ನು ನೋಡಿದರೆ ಗುರುತಿಸುತ್ತಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆ ದಿನ ರಾತ್ರಿ ಆದ್ದರಿಂದ ಕಲ್ಲನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎಮ್.ಎಸ್.ಎ. ವಕೀಲರಿಂದಃ</u>**

ಘಟನೆಯಾದ 4 ದಿನದ ನಂತರ ದೂರನ್ನು ನೀಡಿರುತ್ತೇವೆ. ನಾನು ದೂರಿಗೆ ಸಹಿ ಮಾಡಿ ಪೊಲೀಸ ಠಾಣೆಗೆ ನೀಡಿರುತ್ತೇನೆ. ನಾವು ಹೇಳಿದ ರೀತಿಯಲ್ಲಿ ಪೊಲೀಸರು ದೂರನ್ನು ಬರೆದುಕೊಂಡಿರುತ್ತಾರೆ. ನಾವು ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಜಗಳವಾದ ನಂತರ ಬಸ್ಸಿನಲ್ಲಿ ಹೋಗಿರುತ್ತೇವೆ. ನಾವು ಆಸ್ಪತ್ರೆಗೆ ಆ ದಿನ ರಾತ್ರಿ 10 ರಿಂದ 10.30 ಗಂಟೆಗೆ ಹೋಗಿರುತ್ತೇವೆ. ನಾನು ಆಸ್ಪತ್ರೆಯಲ್ಲಿ 3 ದಿನ ಒಳರೋಗಿಯಾಗಿ ದಾಖಲಾಗಿರುತ್ತೇನೆ. ಶ್ರೀಶೈಲ ಹಾಲಳ್ಳಿ ನನಗೆ ಪರಿಚಯ. ಶ್ರೀಶೈಲ ಹಾಲಳ್ಳಿ ಹಾಗೂ ಚಾಸಾ 6 ರವರಿಗೆ ತಕರಾರು ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 09.03.2016 ರಂದು ಸದರಿ ತಕರಾರು ನಡೆದಾಗ ಚಾಸಾ 6 ರವರಿಗೆ ಯಾಕೆ ತಕರಾರು ಮಾಡುತ್ತಿದ್ದೀರಿ ಎಂದು 1 ನೇ ಆರೋಪಿಯು ಬೆದರಿಸಿದ ಎಂದರೆ ನನಗೆ ಗೊತ್ತಿಲ್ಲ. ಅದೇ ದಿನ 1 ನೇ ಆರೋಪಿಗೆ ನೀನು ನಮ್ಮ ಸಂಬಂಧಿಕನಾಗಿದ್ದರು ಸಹ ಯಾಕೆ ಶ್ರೀಶೈಲ ಹಾಲಳ್ಳಿ ಈತನ ಪರವಾಗಿ ಬಂದಿದ್ದಿಯಾ ಎಂದು ನಾವೆಲ್ಲರೂ ಕೂಡಿಕೊಂಡು 1 ನೇ ಆರೋಪಿಯ ಮನಗೆ ಆತನಿಗೆ ಹೋಡೆಯಲು ಹೋಗಿದ್ದೇವು ಎಂದರೆ ಸರಿಯಲ್ಲ. ಅದೇ ದಿನ ಬಂಗಾರೆವ್ವ ಈಕೆಯೂ 1 ನೇ

ಆರೋಪಿಗೆ ಚಪ್ಪಲಿಯಿಂದ ಹೊಡೆದಿರುತ್ತಾಳೆ ಎಂದರೆ ಸರಿಯಲ್ಲ. ಈ ಮೇಲಿನ ಅಂಶಗಳ ಬಗ್ಗೆ ನನಗೆ ಗೊತ್ತಿದ್ದರು ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಕಡೆಯಿಂದ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಆರೋಪಿತರಿಗೆ ತೊಂದರೆ ನೀಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**